# ಪೇಪರ್ ವೆಯಿಟ್

ರವಿರಾಜ ಬೈಕಂಪಾಡಿ

ಅಡ್ಡಂಡ ಕರಮಚಂದ ಬಗೆ ಹರಿಸಿದ ರೋಚಕ ಪ್ರಕರಣಗಳಲ್ಲಿ, ಈಗ ನಾನು ಹೇಳ ಹೊರಟಿರುವ ದೇವಣಗೇರಿಯ ಓಂಕಾರಯ್ಯನ ಪೇಪರ್ ವೆಯಿಟ್ ಪ್ರಸಂಗವೂ ಒಂದು ಅನ್ನಲು ಯಾವುದೇ ಅಡ್ಡಿಯಿಲ್ಲ.

ಈ ಘಟನೆ ನಡೆದಿದ್ದು ಮಾರ್ಚ್ ತಿಂಗಳ ಉತ್ತರಾರ್ಧದಲ್ಲಿ. ಒಂದು ಸಂಜೆ ವಯಸ್ಸಾದ ಮಹಿಳೆಯೊಬ್ಬರು ಕರಮಚಂದನನ್ನು ಕಾಣಲು ಬಂದರು. ದೇಚಮ್ಮ ಎಂಬ ಹೆಸರಿನ ಆಕೆಯು ಅರುಹಿದ ಸಮಸ್ಯೆ ಅತ್ಯಂತ ಕುತೂಹಲಕಾರಿಯಾಗಿತ್ತು.

"ನಮ್ ಯಜಮಾನ್ರು ಓಂಕಾರಯ್ಯನವರು ನಿವೃತ್ತ ಪೋಸ್ಟ್ ಮಾಸ್ಟರು. ಕಳೆದ ಎರಡು ದಿನಗಳಿಂದ ವಿಚಿತ್ರವಾಗಿ ವರ್ತಿಸ್ತಿದ್ದಾರೆ. ಯಾವ್ದಕ್ಕೋ ಭಯಗೊಂಡ ಥರಾ! ಯಾವಾಗ್ಲೂ ವಾಕಿಂಗಿಗೂ ಹೋಗುವವರು ಎರಡು ದಿನಗಳಿಂದ ಮನೆಯಿಂದ ಹೊರಗೆ ಕಾಲೇ ಇಟ್ಟಿಲ್ಲ. ಏನಾಯ್ತು ಅಂತ ಕೇಳಿದ್ದಕ್ಕೆ 'ಸುಮ್ಮನಿರು' ಅಂತ ನನ್ನನ್ನೇ ದಬಾಯಿಸಿದ್ರು. ಅವರ ಮೇಲೆ ನಿಗಾ ಇರಿಸಿದಾಗ ಅವ್ರು ಮೇಜಿನ ಡ್ರಾಯರಲ್ಲಿ ಇರಿಸಿದ್ದ ಕಾಗದವೊಂದನ್ನು ಆಗಾಗ್ಗೆ ತೆಗೆದು ಓದ್ತಾ ಇದ್ದಿದ್ದನ್ನು ಕಂಡೆ. ಆ ಕಾಗ್ದ ಮೂರು ದಿವ್ಸದ ಹಿಂದೆ ಬಂದಿದ್ದು. ಅದರಲ್ಲಿದ್ದಿದ್ದು ಒಂದೇ ವಾಕ್ಯ. ಅದನ್ನು ಬರೆದು ಕೊಂಡು ಬಂದಿದ್ದೇನೆ."

ದೇಚಮ್ಮ ಪರ್ಸಿನಿಂದ ಒಂದು ಕಾಗದವನ್ನು ಹೊರಗೆಳೆದು ಕರಮಚಂದನಿಗೆ ನೀಡಿದಳು. ನಾವಿಬ್ಬರೂ ಕುತೂಹಲದಿಂದ ಅದನ್ನು ಓದಿದೆವು.

'ಇನ್ನೊಂದು ವಾರದಲ್ಲಿ ಬರ್ತೀನಿ. ಪೇಪರ್ ವೆಯಿಟ್ ತೆಗೆದುಕೊಂಡು ಹೋಗಲಿಕ್ಕೆ. ನಮಸ್ಕಾರ. – ಕುಪ್ಪಂಡ ವೇಣು.'

"ಕುಪ್ಪಂಡ ವೇಣು ಎಂದರೆ ಯಾರು?" ನಾನು ಕೇಳಿದೆ.

"ನನ್ಗೆ ಆ ಹೆಸರಿನವರಾರೂ ಗೊತ್ತಿಲ್ಲ." ದೇಚಮ್ಮನ ಉತ್ತರ.

"ಈ ಪತ್ರ ನಿಮಗೆ ರಿಜಿಸ್ಟರ್ಡ್ ಅಂಚೆಯಲ್ಲಿ ಬಂತೆ?" ಕರಮಚಂದ ಪ್ರಶ್ನಿಸಿದ.

"ಊಹುಂ. ಸ್ಪೀಡ್ ಪೋಸ್ಟಲ್ಲಿ."

"ಎರಡೂ ಒಂದೇ! ಕಳುಹಿಸಿದವನ ಉದ್ದೇಶ–ನಿಮ್ಮ ವಿಳಾಸ ಖಚಿತಪಡಿಸಿಕೊಳ್ಳುವುದು! ಪೇಪರ್ ವೆಯಿಟ್‌ಗೆ ಇಲ್ಲಿ ಪ್ರಾಮುಖ್ಯತೆ ಇಲ್ಲ. ಆ ವಾಕ್ಯ ಆತನ ಕೈ ಬರಹದಲ್ಲಿ ಇತ್ತೆ?"

"ಇಲ್ಲ. ಯಾವುದೋ ಪುಸ್ತಕದಿಂದ ಮುದ್ರಿತ ಶಬ್ದಗಳನ್ನು ತುಂಡರಿಸಿ, ಅಂಟಿಸಿದ್ದಾರೆ."

ಅದನ್ನು ಕೇಳಿ, ಕರಮಚಂದ ಗಂಭೀರನಾದ.

"ಹಾಗಿದ್ದರೆ ಪೇಪರ್ ವೆಯಿಟ್ ಎಂಬ ಶಬ್ದ ಉದ್ದೇಶಪೂರ್ವಕವಾಗಿಯೇ ಆರಿಸಿಕೊಂಡಿದ್ದು ಎಂದು ಊಹಿಸಬಹುದು. ಕೈ ಬರಹದಲ್ಲಿಲ್ಲ ಅಂದರೆ ಕಳಿಸಿದಾತ ತನ್ನ ಕೈಬರಹ ಗೊತ್ತಾಗಬಾರದು ಎಂದು ಬಯಸಿದ್ದಾನೆ. ಬಹುಶಃ ಆತನ ಕೈ ಬರಹ ನಿಮ್ಮ ಯಜಮಾನರಿಗೆ ಚಿರಪರಿಚಿತವಾಗಿರಬೇಕು, ಅಥವಾ ಕಳಿಸಿದಾತ ಸಾಧ್ಯವಾದಷ್ಟೂ ತನ್ನ ಗುರುತು ಸಿಗದಂತೆ ಜಾಗ್ರತೆವಹಿಸಿದ್ದಾನೆ. ಯಾಕೆ? ಯಾವುದೋ ಅಪರಾಧದಲ್ಲಿ ಆತ ಭಾಗಿಯಾಗಿರಬೇಕು ಎಂದು